

ತಿಳಿಯಿತು ಎನ್ನುವ ಅನಿಲ್, ಕನ್ನಡದ ವನಮಾಲಾ ವಿಶ್ವನಾಥ ಅವರು ಮಾತಿನ ಜೊತೆಗೆ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವನ್ನು ಅರ್ಥ ಮಾಡಿಸಲು ಹಾಡತೊಡಗಿದ (ಗಮಕ ವಾಚನ ಮಾಡಿದ) ಪ್ರಸಂಗ ನೆನೆದು ರೋಮಾಂಚಿತರಾದರು. ಜಯಮೋಹನ್ ಅವರದ್ದೇ ಕಾದಂಬರಿಯನ್ನು 'ದಿ ಅಬಿಸ್' ಎಂಬ ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದಿಸಿರುವ ಸುಚಿತ್ರಾ ರಾಮಚಂದ್ರನ್ ಅವರ ಒಳನೋಟಗಳನ್ನು ಕೇಳಿ ಅನಿಲ್ ಚಕಿತಗೊಂಡಿದ್ದಿದೆ. ಜಯಮೋಹನ್ ಕಾದಂಬರಿಗಳ ಬಗೆಗಿನ ಅವರ ಉತ್ಕಟತೆ, ಅದರ ಹಲವು ಮಜಲುಗಳನ್ನು ದಕ್ಕಿಸಿಕೊಂಡಿರುವ ರೀತಿಯನ್ನು ಒಂದು ಬೆರಗು ಎಂದೇ ಅವರು ಬಣ್ಣಿಸುತ್ತಾರೆ. ಮಲಯಾಳಂನ ವಿ.ಜೆ. ಜೇಮ್ಸ್ ಅವರ ಕಾದಂಬರಿಗಳನ್ನು ಅನುವಾದ ಮಾಡಿರುವ ಮಿನಿಸ್ತಿ ನಾಯರ್ ಕೃತಿಯ ಅರ್ಥವಂತಿಕೆಯನ್ನು ದಾಟಿಸಿದ ರೀತಿಯೂ ಅವರಿಗೆ ವಿಶಿಷ್ಟ ಅನುಭವ ಕೊಟ್ಟಿದೆ.

ಭಾರತೀಯ ಭಾಷೆಗಳ ಲೇಖಕರನ್ನು, ಅನುವಾದಕರನ್ನು ಹಿಡಿಯುವುದು ಸುಲಭವಲ್ಲ. ಆದರೆ, ಹೊರದೇಶಗಳ ಸಾಹಿತಿ-ಅನುವಾದಕರನ್ನು ಪಾಡ್‌ಕಾಸ್ಟ್‌ಗೆ ಒಪ್ಪಿಸುವುದು ಇನ್ನೂ ಹೆಚ್ಚು ತಾಳ್ಮೆ,